

بسم اللهِ الرّحمٰن الرّحيم

# ಹಝ್‌ರತ್ ಪೈಗಂಬರ್(ಸ)ರ ದೇವಾರಾಧನೆಯ ವಿಶ್ವಾಸವರ್ಧಕ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–02–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಅಲ್ಲಾಹನು ನಮಗೆ ತಿಳಿಸಿರುವಂತೆ, ಹಝ಼್‌ರತ್ ಪೈಗಂಬರ್(ಸ) ನಮಗೆ ಪ್ರತಿಯೊಂದು ವಿಷಯದಲ್ಲೂ ಅತ್ಯುತ್ತಮ ಮಾದರಿಯಾಗಿದ್ದಾರೆ. ಕಳೆದ ಖುತ್ಬಗಳಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಹಝ಼್‌ರತ್ ಪೈಗಂಬರ್(ಸ)ರಿಗೆ ಅಲ್ಲಾಹನೊಂದಿಗಿನ ಪ್ರೀತಿಯ ಕುರಿತು ಪ್ರಸ್ತಾಪಿಸಲಾಗುತ್ತಿತ್ತು. ಅಲ್ಲಾಹನೊಂದಿಗೆ ಪ್ರೇಮವಿಲ್ಲದೆ ಆರಾಧನೆ ಸಾಧ್ಯವಿಲ್ಲ ಮತ್ತು ಆರಾಧನೆಯಿಲ್ಲದೆ ದೇವಪ್ರೇಮ ಸಾಧ್ಯವಿಲ್ಲ. ಅಲ್ಲಾಹನ ಮೇಲೆ ಪ್ರೀತಿಯಿಲ್ಲದಿದ್ದರೆ, ನೈಜ ಆರಾಧನೆ ಸಾಧ್ಯವೇ ಇಲ್ಲ. ಇಂದು ನಾನು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳನ್ನು ನೀಡುವೆನು.

ಅಲ್ಲಾಹನು ಹಝ಼್‌ರತ್ ಪೈಗಂಬರ್(ಸ)ರ ಪ್ರೇಮದ ಮಟ್ಟವನ್ನು ಪವಿತ್ರ ಖುರ್‌ಆನ್‌ನಲ್ಲಿ ಈ ರೀತಿ ವಿವರಿಸಿದ್ದಾನೆ:

قُلْ اِنَّ صَلَاتِيْ وَنُسُكِيْ وَمَحْيَايَ وَمَمَاتِيْ لِلّٰهِ رَبِّ الْعٰلَمِيْنَ

"ಹೇಳು: ನನ್ನ ಆರಾಧನೆಗಳು, ನನ್ನ ತ್ಯಾಗಗಳು, ನನ್ನ ಜೀವನ ಮತ್ತು ನನ್ನ ಮರಣವು ಸಕಲ ಲೋಕಗಳ ಒಡೆಯನಾದ ಅಲ್ಲಾಹನಿಗಾಗಿಯೇ ಮೀಸಲಾಗಿದೆ."

ಅಲ್ಲಾಹನು ಹಝ಼್‌ರತ್ ಪೈಗಂಬರ್(ಸ)ರಿಗೆ ಈ ಘೋಷಣೆಯನ್ನು ಮಾಡಲು ಹೇಳುವ ಮೂಲಕ, ನಮಗೂ ಈ ಪದವಿಗಳನ್ನು ಗಳಿಸುವುದರ ಕಡೆಗೆ  ಗಮನಸೆಳೆದಿದ್ದಾನೆ.

(ಹುಝೂರ್ ಹೇಳಿದರು:) ಆರಾಧನೆಯ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹಝ಼್‌ರತ್ ಪೈಗಂಬರ್(ಸ)ರ ಮೂಲಕ ನಮಗೆ ಅಸಂಖ್ಯಾತ ಆದೇಶಗಳನ್ನು ನೀಡಿದ್ದಾನೆ. ಅಲ್ಲಾಹನು ಹೀಗೆ ಹೇಳಿದ್ದಾನೆ:

وَمَا خَلَقْتُ الْجِنَّ وَالْاِنْسَ اِلَّا لِيَعْبُدُوْنِ

"ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ನನ್ನ ಆರಾಧನೆಗಾಗಿಯಲ್ಲದೆ ಸೃಷ್ಟಿಸಿಲ್ಲ."

ಮತ್ತೊಂದು ಕಡೆ ಹೀಗೆ ಹೇಳಿದ್ದಾನೆ:

يٰٓاَيُّهَا النَّاسُ اعْبُدُوْا رَبَّكُمُ الَّذِيْ خَلَقَكُمْ وَالَّذِيْنَ مِنْ قَبْلِكُمْ لَعَلَّكُمْ تَتَّقُوْنَ

ಎಲ್ಲೈ ಜನರೇ, ನಿಮ್ಮನ್ನೂ ನಿಮಗಿಂತ ಮುಂಚಿನವರನ್ನೂ ಸೃಷ್ಟಿಸಿದ ನಿಮ್ಮ ರಕ್ಷಕನನ್ನು ಆರಾಧಿಸಿರಿ – ನೀವು ಸುರಕ್ಷಿತರಾಗಲಿಕ್ಕಾಗಿ.

ಆದ್ದರಿಂದ ಅಲ್ಲಾಹನ ಸಾಮೀಪ್ಯವನ್ನು ಪಡೆಯಲು ಮತ್ತು ಧರ್ಮನಿಷ್ಠೆಯನ್ನು ಅಳವಡಿಸಿಕೊಳ್ಳಲು, ಅಲ್ಲಾಹನ ಆರಾಧನೆ ಮಾಡುವುದು ಮತ್ತು ಆರಾಧನೆಯ ಮಟ್ಟವನ್ನು ಉನ್ನತಗೊಳಿಸುವುದು ಅತ್ಯಗತ್ಯವಾಗಿದೆ.

(ಹುಝೂರ್ ಹೇಳಿದರು:) ಹಝ಼್‌ರತ್ ಪೈಗಂಬರ್(ಸ) ಈ ಆದೇಶಗಳನ್ನು ನಮಗೆ ನೀಡಿದಾಗ, ಅದರ ಎಲ್ಲೆಯನ್ನು ತಮ್ಮ ಕೃತಿಯ ಮೂಲಕ ಮಾಡಿ ತೋರಿಸಿದರು ಹಾಗೂ ನೈಜ ವಿಧೇಯತೆ ಮತ್ತು ಅನುಸರಣೆಯು, ನಾವು ನಮ್ಮನ್ನು ಆ ಮಟ್ಟಕ್ಕೆ ತರಲು ಪ್ರಯತ್ನಿಸುವಾಗ ಮಾತ್ರ ಪೂರ್ಣಗೊಳ್ಳುತ್ತದೆ ಎಂದು ಹೇಳಿದರು. ಹಝ಼್‌ರತ್

ಪೈಗಂಬರ್(ಸ) ತಮ್ಮ ಸಮುದಾಯಕ್ಕಾಗಿ ಮಾಡಿರುವ ಪ್ರಾರ್ಥನೆಗಳು, ನಾವು ಅವರ ಮಾದರಿ ಮತ್ತು ಆದೇಶಗಳನ್ನು ಯಾವಾಗಲೂ ನಮ್ಮ ಕಣ್ಣಮುಂದಿಟ್ಟುಕೊಂಡು ಅವುಗಳನ್ನು ಪಾಲಿಸಲು ಪ್ರಯತ್ನಿಸುವಾಗ ಮಾತ್ರ ಅವು ನಮಗೆ ತಲುಪುತ್ತವೆ ಮತ್ತು ನಮಗೆ ಪ್ರಯೋಜನಕಾರಿಯಾಗುತ್ತವೆ.

(ಹುಝೂರ್ ಹೇಳಿದರು:) ನಾನು ಕೆಲವು ಉದಾಹರಣೆಗಳನ್ನು ಪ್ರಸ್ತುತಪಡಿಸುತ್ತೇನೆ. ಒಂದು ಉಲ್ಲೇಖದಲ್ಲಿ ಹೀಗೆ ಬಂದಿದೆ. ಹಝ್ರತ್ ಆಯಿಶ(ರ) ಹೀಗೆ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಚಿತ್ರಗಳಿರುವ (ನಕ್ಷೆಗಳಿರುವ) ಒಂದು ಚಾದರದ ಮೇಲೆ ನಮಾಝ್ ನಿರ್ವಹಿಸುತ್ತಿದ್ದರು. ಅವರು ಅದರ ಚಿತ್ರಗಳನ್ನು ಒಮ್ಮೆ ಕಂಡರು. ಅವರು ನಮಾಝ್ ಮುಗಿಸಿದಾಗ ಹೀಗೆ ಹೇಳಿದರು: "ನನ್ನ ಈ ಚಾದರವನ್ನು ಅಬು ಜಹಮ್‌ರ ಬಳಿಗೆ ಕೊಂಡೊಯ್ಯಿರಿ ಮತ್ತು ಅವರ ಸರಳವಾದ (ಅಂದರೆ ಚಿತ್ರಗಳಿಲ್ಲದ) ಅಂಬಜಾನಿಯ ಚಾದರವನ್ನು ತನ್ನಿರಿ, ಏಕೆಂದರೆ ಈ ಚಾದರ ಈಗಷ್ಟೇ ನಮಾಝಿನಲ್ಲಿ ನನ್ನ ಗಮನವನ್ನು ಬೇರೆಡೆಗೆ ಸೆಳೆಯಿತು."

ಹಝ್ರತ್ ಜಾಫರ್ ಬಿನ್ ಮುಹಮ್ಮದ್(ರ) ತಮ್ಮ ತಂದೆಯಿಂದ ವರದಿ ಮಾಡುತ್ತಾರೆ – ನಾವು ಹಝ್ರತ್ ಆಯಿಶ(ರ)ರೊಡನೆ ಹೀಗೆ ಕೇಳಿದೆವು: "ನಿಮ್ಮ ಮನೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಹಾಸಿಗೆ ಹೇಗಿತ್ತು?" ಆಗ ಅವರು ಹೀಗೆ ಹೇಳಿದರು: "ಅದು ಚರ್ಮದ್ದಾಗಿತ್ತು ಮತ್ತು ಅದರಲ್ಲಿ ಖರ್ಜೂರ ಮರದ ನಾರುಗಳನ್ನು ತುಂಬಲಾಗಿತ್ತು". ಹಝ್ರತ್ ಹಫ್ಸ(ರ)ರೊಡನೆ ಹೀಗೆ ಕೇಳಲಾಯಿತು: "ನಿಮ್ಮ ಮನೆಯಲ್ಲಿ ಹಝ್ರತ್ ಪೈಗಂಬರ್(ಸ)ರ ಹಾಸಿಗೆ ಹೇಗಿತ್ತು?" ಆಗ ಅವರು ಹೇಳಿದರು: "ಅದು ಉಣ್ಣೆಯದ್ದಾಗಿತ್ತು ಮತ್ತು ನಾವು ಅದನ್ನು ಎರಡು ಮಡಿಕೆಗಳಾಗಿ ಮಡಚಿ ಹಾಕುತ್ತಿದ್ದೆವು. ಹಝ್ರತ್ ಪೈಗಂಬರ್(ಸ) ಅದರ ಮೇಲೆ ಮಲಗುತ್ತಿದ್ದರು. ಅದು ಹೆಚ್ಚು ಮೃದುವಾಗಲಿಕ್ಕಾಗಿ ಅದನ್ನು ನಾಲ್ಕು ಮಡಿಕೆಗಳಾಗಿ ಏಕೆ ಹಾಕಬಾರದು ಎಂದು ನಾನು ಒಂದು ರಾತ್ರಿ ಯೋಚಿಸಿದೆ. ಅದರಂತೆ ನಾವು ಅದನ್ನು ನಾಲ್ಕು ಮಡಿಕೆಗಳಾಗಿ ಹಾಕಿದೆವು. ಬೆಳಗಾದಾಗ, "ನೀವು ರಾತ್ರಿ ಏನನ್ನು ಹಾಸಿದ್ದಿರಿ?" ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ನಾನು ಹೇಳಿದೆ: "ಅದು ನಿಮ್ಮದೇ ಹಾಸಿಗೆಯಾಗಿತ್ತು, ಆದರೆ ಅದು ನಿಮಗಾಗಿ ಹೆಚ್ಚು ಆರಾಮದಾಯಕವಾಗಲಿ ಎಂದು ನಾವು ಅದನ್ನು ನಾಲ್ಕು ಬಾರಿ ಮಡಚಿದ್ದೆವು". ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅದನ್ನು ಮೊದಲಿನಂತೆಯೇ ಮಾಡಿರಿ, ಏಕೆಂದರೆ ಅದರ ಅತಿಯಾದ ಮೃದುತ್ವವು ರಾತ್ರಿಯ ನಮಾಝ್ ನಿರ್ವಹಿಸುವುದಕ್ಕೆ ನನಗೆ ತಡೆಯಾಗುತ್ತಿತ್ತು."

ಹಝ್ರತ್ ಮುಆಝ್ ಬಿನ್ ಜಬಲ್(ರ) ವರದಿ ಮಾಡುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರ ಹಿಂದೆ ಸವಾರಿಮೃಗದ ಮೇಲೆ ಕುಳಿತಿದ್ದೆನು. ಆಗ "ಎಲೈ ಮುಆಝ್ ಬಿನ್ ಜಬಲ್" ಎಂದು ಹಝ್ರತ್ ಪೈಗಂಬರ್(ಸ) ಕರೆದರು. ನಾನು ಹಾಜರಿದ್ದೇನೆ, ಅಲ್ಲಾಹನ ಪ್ರವಾದಿಯೇ ಮತ್ತು ಇದು ನನ್ನ ಸೌಭಾಗ್ಯ ಎಂದು ನಾನು ಹೇಳಿದೆನು. "ಅಲ್ಲಾಹನಿಗೆ ತನ್ನ ದಾಸರ ಮೇಲಿರುವ ಹಕ್ಕು ಏನು ಎಂದು ನಿನಗೆ ತಿಳಿದಿದೆಯೇ?" ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. "ಅಲ್ಲಾಹ್ ಮತ್ತು ಅವನ ಪ್ರವಾದಿಗೆ ಹೆಚ್ಚು ತಿಳಿದಿದೆ" ಎಂದು ನಾನು ಹೇಳಿದೆನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ದಾಸರು ತನ್ನ ಆರಾಧನೆ ಮಾಡಬೇಕು ಮತ್ತು ಯಾರನ್ನೂ ಅವನ ಪಾಲುದಾರನನ್ನಾಗಿ ಮಾಡಬಾರದು ಎಂಬುದು ದಾಸರ ಮೇಲೆ ಅಲ್ಲಾಹನಿಗಿರುವ ಹಕ್ಕಾಗಿದೆ". ಅನಂತರ ಹಝ್ರತ್ ಪೈಗಂಬರ್(ಸ) ಸ್ವಲ್ಪ ದೂರ ಸಾಗಿದರು ಮತ್ತು "ಎಲೈ ಮುಆಝ್ ಬಿನ್ ಜಬಲ್" ಎಂದು ಕರೆದರು. "ಲಬ್ಬೈಕ್ ಅಲ್ಲಾಹನ ಪ್ರವಾದಿಯೇ, ಇದು ನನ್ನ ಸೌಭಾಗ್ಯ" ಎಂದು ನಾನು ಹೇಳಿದೆನು. "ದಾಸರಿಗೆ ಅಲ್ಲಾಹನ ಮೇಲಿರುವ ಹಕ್ಕು ಏನು ಎಂದು ನಿನಗೆ ತಿಳಿದಿದೆಯೇ?" ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. "ಅಲ್ಲಾಹ್ ಮತ್ತು ಅವನ ಪ್ರವಾದಿಗೆ ಉತ್ತಮವಾಗಿ ತಿಳಿದಿದೆ" ಎಂದು ನಾನು ಹೇಳಿದೆನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: "ಅವನು ದಾಸರಿಗೆ ಶಿಕ್ಷೆ ನೀಡಬಾರದು ಎಂಬುದು (ಅವರ ಹಕ್ಕಾಗಿದೆ)".

ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಪೈಗಂಬರ್(ಸ)ರ ಪ್ರಶಂಸೆಯಲ್ಲಿ ಹೀಗೆ ಹೇಳುತ್ತಾರೆ:

"ಹಝ್ರತ್ ಪೈಗಂಬರ್(ಸ) ಪವಿತ್ರ ಖುರ್‌ಆನ್‌ನ ಪ್ರಚಾರಕ್ಕಾಗಿ ನೇಮಕಗೊಂಡಿರುವ ಹಾಗೆಯೇ ಸುನ್ನತ್ (ಪ್ರವಾದಿಯವರ ಮಾದರಿ) ಸ್ಥಾಪನೆಗಾಗಿಯೂ ನೇಮಕಗೊಂಡಿದ್ದರು. ಆದ್ದರಿಂದ ಪವಿತ್ರ ಖುರ್‌ಆನ್ ಹೇಗೆ ಖಚಿತವೋ, ಹಾಗೆಯೇ ನಿರಂತರವಾಗಿ ನಡೆದುಬಂದಿರುವ ಸುನ್ನತ್ ಕೂಡ ಖಚಿತವಾಗಿದೆ. ಹಝ್ರತ್ ಪೈಗಂಬರ್(ಸ) ಈ ಎರಡೂ ಸೇವೆಗಳನ್ನು ತಮ್ಮ ಸ್ವಹಸ್ತದಿಂದ ನೆರವೇರಿಸಿದರು ಮತ್ತು ಎರಡನ್ನೂ ತಮ್ಮ ಕರ್ತವ್ಯವೆಂದು ಭಾವಿಸಿದರು. ಉದಾಹರಣೆಗೆ, ನಮಾಝಿನ ಬಗ್ಗೆ ಆಜ್ಞೆಯಾದಾಗ, ಹಝ್ರತ್ ಪೈಗಂಬರ್(ಸ) ಅಲ್ಲಾಹನ ಈ ಮಾತನ್ನು ತಮ್ಮ ಕೃತಿಯ ಮೂಲಕ ಸ್ಪಷ್ಟಪಡಿಸಿದರು ಮತ್ತು ಫಜ್ರ್ ನಮಾಝಿನ ರಕ್‌ಅತ್‌ಗಳು ಇಷ್ಟು, ಮಗ್ರಿಬ್ ನಮಾಝಿನ ರಕ್‌ಅತ್‌ಗಳು ಇಷ್ಟು ಮತ್ತು ಉಳಿದ ನಮಾಝ್‌ಗಳಿಗೆ ಇಷ್ಟಿಷ್ಟು ರಕ್‌ಅತ್‌ಗಳು ಎಂದು

ಪ್ರಾಯೋಗಿಕವಾಗಿ ತೋರಿಸಿಕೊಟ್ಟರು. ಹಾಗೆಯೇ ಹಜ್ಜ್ ನಿರ್ವಹಿಸಿ ತೋರಿಸಿದರು. ಅನಂತರ ತಮ್ಮ ಸ್ವಹಸ್ತದಿಂದ ಸಾವಿರಾರು ಸಹಾಬಿಯರನ್ನು ಈ ಕಾರ್ಯಕ್ಕೆ ಬದ್ಧರನ್ನಾಗಿ ಮಾಡಿ, ಆಚರಣೆಯ ಸರಣಿಯನ್ನು ಬಲವಾಗಿ ಸ್ಥಾಪಿಸಿದರು."

ಹಝ್ರತ್ ಮುಸ್ಲಿಹ್ ಮೌಊದ್(ರ) ತಹಜ್ಜುದ್ ಬಗ್ಗೆ ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ಈ ನಫಲ್ (ಐಚ್ಛಿಕ) ನಮಾಝ್‌ಗಳ ಬಗ್ಗೆ ಎಷ್ಟು ಕಾಳಜಿ ಇತ್ತೆಂದರೆ, ಅವು ನಫಲ್ ಆಗಿದ್ದರೂ, ಸಹಾಬಿಯರಲ್ಲಿ ಯಾರು ಈ ನಫಲ್ ನಮಾಝನ್ನು ನಿರ್ವಹಿಸುತ್ತಾರೆ ಎಂದು ಕಾಳಜಿಯಿಂದ ನೋಡುತ್ತಿದ್ದರು. ಯಾರೆಲ್ಲ ನಮಾಝ್ ನಿರ್ವಹಿಸುತ್ತಿಲ್ಲ ಎಂದು ತಿಳಿಯಲು ಅವರು ನಗರದ ಬೀದಿಗಳಲ್ಲಿ, ರಸ್ತೆಗಳಲ್ಲಿ ಓಡಾಡುತ್ತಿದ್ದರು.

(ಹುಝೂರ್ ಹೇಳುತ್ತಾರೆ:) ಇಂದಿನ ದಿನಗಳಲ್ಲಿ ಯಾರನ್ನಾದರೂ "ನೀವು ಎಷ್ಟು ಹೊತ್ತು ನಮಾಝ್ ನಿರ್ವಹಿಸುತ್ತೀರಿ?' ಎಂದು ಕೇಳಿದರೆ, "ಇದು ನಮ್ಮ ವೈಯಕ್ತಿಕ ವಿಷಯ" ಎಂದು ಜನರು ಕೋಪಗೊಳ್ಳುತ್ತಾರೆ. ಆದರೆ ಹಝ್ರತ್ ಪೈಗಂಬರ್(ಸ) ಸ್ವತಃ ತಹಜ್ಜುದ್ ನಮಾಝಿನ ಪರಿಶೀಲನೆ ಕೂಡ ನಡೆಸುತ್ತಿದ್ದರು.

ಒಮ್ಮೆ ಒಂದು ಸಭೆಯಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಉಮರ್(ರ)ರ ಪ್ರಸ್ತಾಪ ಬಂದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು: "ಅವರು ತುಂಬಾ ಒಳ್ಳೆಯವರು, ಆದರೆ ತಹಜ್ಜುದ್ ಸಹ ಅನುಷ್ಠಿಸಬೇಕು".

ಹಝ್ರತ್ ಪೈಗಂಬರ್(ಸ) ಹೇಳಿದರು: ರಾತ್ರಿ ಕಣ್ಣು ತೆರೆದರೆ, ಎದ್ದು ತಹಜ್ಜುದ್ ಅನುಷ್ಠಿಸುವ ಮತ್ತು ಪತ್ನಿಯನ್ನು ಎಬ್ಬಿಸಿ 'ನೀನೂ ಎದ್ದು ತಹಜ್ಜುದ್ ನಿರ್ವಹಿಸು' ಎಂದು ಹೇಳುವ ಹಾಗೂ ಅವಳು ಏಳದಿದ್ದರೆ ಅವಳ ಮುಖದ ಮೇಲೆ ನೀರು ಚಿಮುಕಿಸಿ ಎಬ್ಬಿಸುವ ಪತಿಯ ಮೇಲೆ ಅಲ್ಲಾಹನು ಈ ಲೋಕದಲ್ಲಿ ಕರುಣೆದೋರಲಿ. ಅದೇ ರೀತಿ, ಸ್ವತಃ ತಹಜ್ಜುದ್ ನಿರ್ವಹಿಸುವ ಮತ್ತು ಪತಿಯನ್ನು ಎಬ್ಬಿಸುವ ಹಾಗೂ ಅವನು ಏಳದಿದ್ದರೆ ಅವನ ಮುಖದ ಮೇಲೆ ನೀರು ಚಿಮುಕಿಸುವ ಪತ್ನಿಯ ಮೇಲೆ ಅಲ್ಲಾಹನು ಈ ಲೋಕದಲ್ಲಿ ಕರುಣೆ ತೋರಲಿ.

(ಹುಝೂರ್ ಹೇಳಿದರು:) ನಮಾಝ್‌ಗಳಲ್ಲಿ ಅಳುವ ಸ್ಥಿತಿ ಉಂಟಾಗುವುದು ಕೂಡ ಬಹಳ ಮುಖ್ಯವಾಗಿದೆ. ಇದಕ್ಕಾಗಿಯೂ ಮನುಷ್ಯನು ಪ್ರಯತ್ನಿಸಬೇಕು. ಇದಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ಒಂದು ವಿಧಾನವನ್ನೂ ತಿಳಿಸಿದ್ದಾರೆ, ಅದೇನೆಂದರೆ ನಮಾಝಿನಲ್ಲಿ ನಿಮ್ಮ ಮುಖವನ್ನು ಅಳುವವನಂತೆ ಮಾಡಿಕೊಳ್ಳಬೇಕು, ಈ ಬಾಹ್ಯ ಸ್ಥಿತಿಯಿಂದ ಹೃದಯದ ಮೇಲೂ ಪರಿಣಾಮ ಉಂಟಾಗುತ್ತದೆ. ಅನಂತರ ಮನುಷ್ಯನಿಗೆ ನಿಜವಾಗಿಯೂ ಅಳು ಬರುತ್ತದೆ.

ಹಝ್ರತ್ ಪೈಗಂಬರ್(ಸ) ಮಲಗುವಾಗ ಆಯತುಲ್ ಕುರ್ಸಿ, ಸುರಃ ಇಖ್ಲಾಸ್, ಸುರಃ ಅಲ್ ಫಲಕ್ ಮತ್ತು ಸೂರತುನ್ನಾಸ್ (ಕೊನೆಯ ಮೂರು ಸೂರತುಗಳನ್ನು) ಮೂರು ಬಾರಿ ಓದಿ ಕೈಗಳ ಮೇಲೆ ಊದಿಕೊಳ್ಳುತ್ತಿದ್ದರು. ಅನಂತರ ಕೈಗಳನ್ನು ತಮ್ಮ ದೇಹದ ಮೇಲೆ ಸವರಿಕೊಳ್ಳುತ್ತಿದ್ದರು. ತಲೆಯಿಂದ ಪ್ರಾರಂಭಿಸಿ ಕೈ ಎಲ್ಲಿಯವರೆಗೆ ತಲುಪುತ್ತದೆಯೋ ಅಲ್ಲಿಯವರೆಗೆ ಸವರಿಕೊಳ್ಳುತ್ತಿದ್ದರು.

(ಹುಝೂರ್ ಹೇಳಿದರು:) ಕೆಲವು ಜನರು ನನಗೆ ಪತ್ರ ಬರೆಯುತ್ತಾರೆ. ನಮ್ಮಲ್ಲಿ ಒಳಿತುಗಳು ಉಂಟಾಗಲು ನಮ್ಮ ಪಾಪಗಳು ಅಳಿಸಿಹೋಗಲು, ನಮ್ಮ ಕೆಲಸಗಳು ಆಗಲು ಮತ್ತು ಅಲ್ಲಾಹನ ಸಾಮೀಪ್ಯ ದೊರೆಯಲಿಕ್ಕಾಗಿ ನಮಗೆ ಯಾವುದಾದರೂ ಸಣ್ಣ ದುಆ ತಿಳಿಸಿರಿ, ನಾವು ಮಾಡಬಹುದಾದ ಯಾವುದಾದರೂ ಝಿಕ್ರ್ ತಿಳಿಸಿರಿ ಎಂದು ಕೇಳುತ್ತಾರೆ. ಅದಕ್ಕೆ ಮೊದಲ ವಿಷಯ ಆರಾಧನೆಯಾಗಿದೆ. ಅಂದರೆ ಕಡ್ಡಾಯವಾಗಿರುವ ನಮಾಝ್‌ಗಳು. ಅದರ ನಂತರ ಅಲ್ಲಾಹನ ಝಿಕ್ರ್ ಬರುತ್ತದೆ. ದೇವಸ್ಮರಣೆ ಮನುಷ್ಯನ ಗಮನವನ್ನು ಹೆಚ್ಚಿನ ಒಳಿತುಗಳ ಕಡೆಗೆ ಸೆಳೆಯುತ್ತದೆ. ಇದರೊಂದಿಗೆ ಇತರ ಉತ್ತಮ ಸ್ವಭಾವಗುಣಗಳನ್ನು ತೋರಿಸುವುದು ಮತ್ತು ಸತ್ಕರ್ಮಗಳನ್ನು ಮಾಡುವುದು ಕೂಡ ಅವಶ್ಯಕವಾಗಿದೆ.

ಹಝ್ರತ್ ಪೈಗಂಬರ್(ಸ) ಪಾದರಕ್ಷೆಗಳನ್ನು ಧರಿಸಿ ಕೂಡ ನಮಾಝ್ ನಿರ್ವಹಿಸುತ್ತಿದ್ದರು ಎಂದು ಒಂದು ವರದಿಯಲ್ಲಿ ಬಂದಿದೆ. ಅಂದರೆ ಎಲ್ಲಿಯಾದರೂ ಸುಲಭಗೊಳಿಸುವ ಅವಶ್ಯಕತೆ ಇದ್ದರೆ ಅದನ್ನು ಅಳವಡಿಸಿಕೊಳ್ಳುತ್ತಿದ್ದರು. ಆದ್ದರಿಂದ ಪಾದರಕ್ಷೆ ಶುದ್ಧವಾಗಿದ್ದರೆ ಮತ್ತು ಅದು ಮಲಿನವಾಗುವ ಅಪಾಯವಿರುವ ಸ್ಥಳವಾಗಿದ್ದರೆ, ಪಾದರಕ್ಷೆ ಧರಿಸಿಯೇ ನಮಾಝ್ ನಿರ್ವಹಿಸಬಹುದು. ಹಝ್ರತ್ ಪೈಗಂಬರ್(ಸ) ಹೀಗೆ ಮಾಡುವ ಮೂಲಕ ಮುಸ್ಲಿಮ್ ಉಮ್ಮತಿನ ಮೇಲೆ ದೊಡ್ಡ ಉಪಕಾರ ಮಾಡಿದ್ದಾರೆ ಮತ್ತು ಅವರನ್ನು ಔಪಚಾರಿಕತೆ ಮತ್ತು ಪ್ರಯಾಸಗಳಿಂದ ರಕ್ಷಿಸಿದ್ದಾರೆ.

ಹಝ್ರತ್ ಪೈಗಂಬರ್$^{(ಸ)}$ ಜಮಾಅತಾಗಿ ನಿರ್ವಹಿಸುವ ನಮಾಝಿಗೆ ಎಷ್ಟೊಂದು ಮಹತ್ವ ನೀಡುತ್ತಿದ್ದರೆಂದರೆ, ಒಮ್ಮೆ ಅವರ ಬಳಿಗೆ ಒಬ್ಬ ಕುರುಡ ವ್ಯಕ್ತಿ ಬಂದು ಹೀಗೆ ಹೇಳಿದರು: "ಅಲ್ಲಾಹನ ಪ್ರವಾದಿಯೇ, ನನ್ನ ಮನೆ ಮಸೀದಿಯಿಂದ ತುಂಬಾ ದೂರವಿದೆ ಮತ್ತು ನನಗೆ ಮಸೀದಿಗೆ ತಲುಪಲು ತುಂಬಾ ಕಷ್ಟವಾಗುತ್ತದೆ, ಆದ್ದರಿಂದ ನೀವು ಅನುಮತಿ ನೀಡಿದರೆ ಮಳೆಗಾಲದ ದಿನಗಳಲ್ಲಿ ನಾನು ನನ್ನ ಮನೆಯಲ್ಲೇ ನಮಾಝ್ ನಿರ್ವಹಿಸುತ್ತೇನೆ". "ಸರಿ, ನಿರ್ವಹಿಸಿರಿ" ಎಂದು ಹಝ್ರತ್ ಪೈಗಂಬರ್$^{(ಸ)}$ ಹೇಳಿದರು. ಅವರು ಅಲ್ಲಿಂದ ಹೊರಟು ಹೋದ ಸ್ವಲ್ಪ ಸಮಯದ ನಂತರ "ಅವರನ್ನು ಮರಳಿ ಕರೆದು ತನ್ನಿ" ಎಂದು ಹಝ್ರತ್ ಪೈಗಂಬರ್$^{(ಸ)}$ ಸಹಾಬಿಯರೊಡನೆ ಹೇಳಿದರು. ಅವರು ಮರಳಿ ಬಂದಾಗ ಹಝ್ರತ್ ಪೈಗಂಬರ್$^{(ಸ)}$ ಕೇಳಿದರು: "ನಿಮ್ಮ ಮನೆಗೆ ಅಧ಼ಾನ್ (ಬಾಂಗ್) ಶಬ್ದ ಕೇಳಿಸುತ್ತದೆಯೇ?" ಅವರು ಹೇಳಿದರು: "ಹೌದು ಅಲ್ಲಾಹನ ಪ್ರವಾದಿಯೇ! ಅಧ಼ಾನ್ ಶಬ್ದವಂತೂ ಕೇಳಿಸುತ್ತದೆ". ಆಗ ಹಝ್ರತ್ ಪೈಗಂಬರ್$^{(ಸ)}$ ಹೇಳಿದರು: "ಅಧ಼ಾನ್ ಶಬ್ದ ನಿಮ್ಮ ಮನೆಗೆ ತಲುಪುವುದಾದರೆ, ನೀವು ಮಸೀದಿಗೆ ಬನ್ನಿರಿ"

ಅಲ್ಲಾಹನು ನಮಗೆ ಆರಾಧನೆಯ ಹಕ್ಕನ್ನು ಪೂರೈಸುವ ಮತ್ತು ಹಝ್ರತ್ ಪೈಗಂಬರ್$^{(ಸ)}$ರ ಅತ್ಯುತ್ತಮ ಮಾದರಿಯನ್ನು ಅಳವಡಿಸಿಕೊಳ್ಳುವ ಸೌಭಾಗ್ಯವನ್ನು ನೀಡಲಿ.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis****(atba)*

At, ***'Masjid Mubarak',*** *Islamabad, Tilford,* U.K. On 06-02-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email*****:** *khutuba.kannada@gmail.com*

**You can find all the Sermons archived at**: www.alislam.org/friday-sermon